ಶ್ರಿ ಎಸ್. ಬಂಗಾರಪ್ಪ.—ಸ್ವಾಮಿ, ನಾನು ಹೇಳತಕ್ಕ ವಿಷಯವನ್ನು ತಾವು ಎರಡು ನಿಮಿಷ ಸಾವಧಾನದಿಂದ ಕೇಳಿದ್ದರೆ ಪರಿಸ್ಥಿತಿ ಇಷ್ಟು ಮುಂದಕ್ಕೆ ಹೋಗುತ್ತಿರಲಿಲ್ಲ ಎಂದು ನನ್ನ ಭಾವನೆ. ಈಗಾಗಲೇ ಮಾನ್ಯ ಬೊಮ್ಮಾಯಿಯವರು...

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ ನನ್ನ ಕ್ರಿಯಾಲೋಪ ಇದೆ.

ಅಧ್ಯಕ್ಷರು —ನಾನು ಮಾನ್ಯ ಸದಸ್ಯರುಗಳಿಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ, ಎಲ್ಲರೂ ಸ್ವಲ್ಪ ಶಾಂತರೀತಿಯಿಂದ ಇರಿ. ಸಭೆ ಕಾರ್ಯಕಲಾಪಗಳನ್ನು ಚೆನ್ನಾಗಿ ನಡೆಸಿಕೊಂಡುಹೋಗುವುದಕ್ಕೆ ಅವಕಾಶ ಮಾಡಿಕೊಡಿ. ಮಾನ್ಯ ಸದಸ್ಯರು ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಹೀಗೆ ಎಲ್ಲರೂ ನಿಂತುಕೊಂಡು ಕೂಗಾಡಿದರೆ ಸಭೆ ನಡೆಸುವುದಾದರೂ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ನಾವು ಸಭೆಯ ಕಾರ್ಯಕಲಾಪ ನಡೆಯಬಾರದು ಎಂಬ ಉದ್ದೇಶದಿಂದ ಮಾತನಾಡುತ್ತಿಲ್ಲ. ಆದರೆ ಸಭೆಯಲ್ಲಿ ಹಕ್ಕಿನ ಪ್ರಶ್ನೆ ಬಂದಾಗ ಅಥವಾ ಯಾವುದಾದರೂ ಪ್ರಮುಖವಾದ ಪ್ರಶ್ನೆ ಬಂದಾಗ ಅದರ ಕಡೆ ಕೂಡ ಅಷ್ಟೇ ಸರಿಸಮಾನವಾಗಿ ನಿಯಮಾವಳಿ ಪ್ರಕಾರ ಕಾಣಬೇಕೆಂದು ಮಾನ್ಯ ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ. ಸರ್ಕಾರದ ಕಾರ್ಯಕಲಾಪಗಳನ್ನು ಮುಗಿಸಬೇಕೆಂದು ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿದ್ದಾರೆ. ಅದಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ಒಳ್ಳೆಯ ಕಾರ್ಯಕಲಾಪಗಳಿದ್ದರೆ ಮುಂಗಿಸೋಣ. ನಾವು ಹೇಳತಕ್ಕಂತಹ ವಿಷಯದ ಪ್ರಮುಖ್ಯತೆಯ ಪ್ರಕಾರ ಕೆಲವು ವಿಷಯಗಳ ಬಗ್ಗೆ ಇತ್ತ ಕಡೆಯ ಸದಸ್ಯರಾಗಿರಬಹುದು, ಅತ್ತಕಡೆಯ ಸದಸ್ಯರಾಗಿರಬಹುದು, ಮುಖ್ಯವಾದ ವಿಷಯಗಳಾದರೆ ಅಂದರೆ ಹಕ್ಕುಚ್ಯುತಿ ಪ್ರಶ್ನೆಯಾದರೆ, ಮುಖ್ಯವಾದ ವಿಷಯಗಳಾದರೆ ಅವುಗಳನ್ನು ನಿಲುವಳಿ ಸೂಚನೆ, ಹಕ್ಕುಚ್ಯುತಿ ಪ್ರಶ್ನೆ, ಕಾಲಿಂಗ್ ಅಟೆನ್ಷನ್, ಯಾವುದೇ ಇರಲಿ ಅವುಗಳ ಮೂಲಕ ಕಳುಹಿಸಬೇಕಾಗುತ್ತದೆ. ಆ ರೀತಿ ಕಳುಹಿಸಿದಾಗ ಅದಕ್ಕೆ ರಕ್ಷಣೆ ತಾವು ಕೊಡದಿದ್ದರೆ ಈ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡುಹೋಗುವುದಕ್ಕೆ ಯಾರಿಂದಲೂ ಸಾಧ್ಯವಾಗುವುದಿಲ್ಲ. ಆದರೆ ಅಂತಹ ವಿಷಯಗಳನ್ನು ಈ ಮನೆಯಲ್ಲಿ ಎತ್ತುವುದಕ್ಕೆ ತಮ್ಮ ಒಪ್ಪಿಗೆ ಪಡೆಯಬೇಕಾಗುತ್ತದೆ. ಈಗ ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ ತಾವು ಈ ಒಂದು ಹಕ್ಕುಚ್ಯುತಿ ಪ್ರಶ್ನೆಯ ವಿಷಯವನ್ನು ನಾಳೆ ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದ್ದೀರಿ. ಅದಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ತಾವು ನಾಳೆ ಏನು ಮಾಡಬಹುದೆಂಬ ಒಂದು ಶಂಕೆ ನನ್ನ ಮನಸ್ಸಿನಲ್ಲಿದೆ. ಆದರ ಬಗ್ಗೆ ಪರಿಹಾರ ತಾವು ಹೇಳಿದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ರೂಲ್ಸ್ ೧೭೭ರ ಪ್ರಕಾರ ನಾನು ಏನು ಹೇಳುತ್ತಿದ್ದೇನೆಂದರೆ, ತಾವು ಈ ವಿಷಯವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಒಪ್ಪಿಗೆ ಕೊಡಬಹುದು. ಏತಕ್ಕಾಗಿ ಈ ವಿಷಯವನ್ನು ತಂದಿದ್ದೇವೆಂಬುದನ್ನು ತಾವು ಸ್ವಲ್ಪ ನೋಡಬೇಕು. ನಾಳೆ ಒಂದು ವೇಳೆ ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಸರಿ, ಇಲ್ಲದಿದ್ದರೆ ತಾವು ರೂಲಿಂಗ್ ಕೊಡುವ ಮೊದಲು ಯಾರು ನೋಟೀಸ್‌ನ್ನು ಕಳುಹಿಸಿದ್ದಾರೆ, ಅವರಿಗೆ ವಿಷಯದ ಬಗ್ಗೆ ವಿವರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಅವಕಾಶ ಕೊಟ್ಟರೆ ತಾವು ವಿಷಯಗಳನ್ನು ತಿಳಿಯಲು ಬಹಳ ಉಪಯೋಗವಾಗುತ್ತದೆ. ನಾನು ಪದೇ ಪದೇ ಎದ್ದುನಿಂತು ಮಾತನಾಡತಕ್ಕಂತಹ ಸ್ವಭಾವದವನಲ್ಲ. ಈ ಸದನದ ಗಮನಕ್ಕೆ ವಿಷಯವನ್ನು ತರುತ್ತಿದ್ದೇನೆ. ಕೌಲ್ ಮತ್ತು ಶಕ್ಧರ್ ಅವರ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ....

ಅಧ್ಯಕ್ಷರು.—ಅದನ್ನೂ ನಾಳೇ ಹೇಳಿ. ನಾನು ಕೇಳುತ್ತೇನೆ. ಆ ನಂತರ ಮಿನಿಟ್‌ನಲ್ಲೇ ಡಿಸೈಡ್ ಮಾಡುತ್ತೇನೆ. ಕನ್ಸಿಡರ್ ಮಾಡುತ್ತೇನೆಂದು ತಿಳಿಯಬೇಡಿ. ವಿಷಯ ತಿಳಿದ ನಂತರ ಡಿಸೈಡ್ ಮಾಡುತ್ತೇನೆಂದು ತಿಳಿಯಬೇಡಿ. ವಿಷಯ ತಿಳಿದು ನಂತರ ಡಿಸೈಡ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಆಯಿತು.

Alleged Contempt of Court by Sri L. G. Havanur

ಶ್ರೀ ಎಂ. ವೀರಪ್ಪ ಮೊಯ್ಲಿ —ಕಾನೂನು ಸಚಿವರಾಗಿರುವಂತಹ ಶ್ರೀ ಮಾನ್ ಹಾವನೂರ್ ರವರ ವಿಚಾರದಲ್ಲಿ ಕೋರ್ಟ್ ನಿಂದನೆ ಆರೋಪದ ಬಗ್ಗೆ ರೂಲ್ ೫೦ರ ಕೆಳಗೆ ಒಂದು ನೋಟಿಸ್ ಕೊಟ್ಟಿದ್ದೇನೆ. ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು.—ಅದನ್ನು ನಾನು ನೋಡಿಲ್ಲ. ನೋಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಶ್ರೀ ಹಾವನೂರ್ ರವರು ಕೋರ್ಟ್ ನಿಂದನೆಗೆ ಒಳಗಾಗಿದ್ದರೂ ಸಹ ಅವರು ಕಾನೂನು ಸಚಿವರಾಗಿ ಮುಂದುವರಿಯುತ್ತಿದ್ದಾರೆ. ಸರ್ಕಾರವನ್ನು ನಡೆಸಿಕೊಂಡು ಬರುತ್ತಿರಕ್ಕಂತಹ ಒಬ್ಬ ಕಾನೂನು ಸಚಿವರು ಕೋರ್ಟಿನಿಂದನೆಗೆ ಒಳಗಾಗಿದ್ದಾರೆ. ಇದು ಬಹಳ ಪ್ರಮುಖವಾದ ವಿಚಾರ. ಇತರ ವಿಚಾರಗಳನ್ನು ಬದಿಗೊತ್ತಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ನಾನು ಅದನ್ನು ನೋಡುತ್ತೇನೆ. ಆಮೇಲೆ ಪ್ರಸ್ತಾಪ ಮಾಡಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಯಾವುದೇ ಇತರೇ ಕಾರ್ಯಕಲಾಪಗಳನ್ನು ಬದಿಗೊತ್ತಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

SRI L. G. HAVANUR (Minister for Law and Social welfare).—Sir, almost every member of this House and even the hon.Deputy Leader of the Opposition has committed a contempt of this House and he has no right to continue here as a member.

SRI K. BHASKAR NAIDU.—I do not know how you allow these things to go on I want you to be strong. Please use all the powers that are given to you.

SRI S. R. BOMMAI.—Sir, I would like to know what the Hon. Minister for Law has said. It should be read out. I did not hear it properly. According to me, he said that every member of this House has committed contempt of this House. If he has said that.....

MR. SPEAKER.—I will look into it.

SRI L. G. HAVANUR.—I said 'almost every member'.

SRI S. R. BOMMAI.—That means, except him everybody else has committed contempt of this House. This is a very srious matter and we cannot tolerate it. If the Law Minister has this much audacity, then let us discuss this matter. I would like to ask the Leader of the House whether such a statement by the Law Minister is permi asible. I was sitting silently but when he made a summary allegation against the members sitting here, I got up. Shri L. G. Havanur is a good friend of mine. He has not faced any election; let him face the people if he has got the guts. By the grace of Sri Devaraj Urs, he is here.

SRI L. G. HAVANUR.—I would not have been in politics if I were to depend upon people like the hon. Member. Because of Sri Devaraj Urs, I am here. This shows how intolerant you are. He must know that I was elected unopposed as President of the Municipality.

SRI S. R. BOMMAI.—That was in a municipal election.

MR. SPEAKER.—Please avoid personal references.

SRI S. R. BOMMAI.—He should with draw that. Let the record be put right. It is an allegation aganist every member, Let him make a specific allegation against a specific member if he wants. He has made an allegation against every Member. That should be withdrawn.

೩–೦೦ ಪಿ. ಎಂ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ನಾನು ಒಂದು ವಿಷಯ ಹೇಳುತ್ತೇನೆ. ಅದೇನೆಂದರೆ ಅವರು ಒಂದು ಹೇಳಿದರು, ಇವರು ಒಂದು ಹೇಳಿದರು ಅಂತ ಅದನ್ನೆಲ್ಲಾ ತರಿಸಿಕೊಂಡು ಇಲ್ಲಿ ಓದುತ್ತಾ ಇದ್ದರೆ ನಾವು ಇದನ್ನೇ ಇಲ್ಲಿ ಚರ್ಚೆ ಮಾಡುತ್ತಾ ಕುಳಿತು ಕೊಳ್ಳೋಣವೇ ? ಆದುದರಿಂದ ನಾನು ಹೇಳುವುದು ಇಷ್ಟೆ. ಅವರು ಏನಾದರೂ ತಪ್ಪು ಮಾಡಿದ್ದರೆ ಅದನ್ನು ರೆಕಾರ್ಡ್ ತೆಗೆಸಿ ನೋಡಿದರೆ ಗೊತ್ತಾಗುತ್ತದೆ. ಅನಂತರ ಸದಸ್ಯರು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲ ವಾಗುತ್ತದೆ. ಒಂದು ವೇಳೆ ಕಾನೂನು ಮಂತ್ರಿಗಳು ಹೇಳಿದ್ದರಲ್ಲಿ ತಪ್ಪು ಇದ್ದರೆ ಅದರ ಮೇಲೆ ಕಾನೂನು ಪ್ರಕಾರ ರೈಸ್ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಹಕ್ಕು ಇದೆ. ಅದು ಕಂಟೆಪ್ಟ್ ಆಫ್ ಕೋರ್ಟ್ ಆಗಲಿ ಅಥವಾ ಪ್ರಿವಿಲೇಜ್ ಮೋಷನ್ ವಿಷಯದ ಮೇಲಾಗಲಿ ಆಗಿದ್ದರೆ ರೂಲ್ ಪ್ರಕಾರ ಅದನ್ನು ಚರ್ಚೆ ಮಾಡಲಿ. ಆ ಪ್ರಶ್ನೆಗೆ ಒಳಗಾಗುವ ರೀತಿಯಲ್ಲಿ ಅವರು ಪ್ರೂವ್ ಮಾಡಲಿ.

SRI S. R. BOMMAI.—I agree with the suggestion of Parliamentary affairs Minister.

ಶ್ರೀ ಮಳ್ಳೂರು ಆನಂದರಾವ್–ಈಗ ಮಾನ್ಯ ಬೊಮ್ಮಾಯಿಯವರಿಗೆ ಮಾನ್ಯ ಹಾಪನೂರರವರು ಹೇಳಿದ ತಕ್ಷಣ ಆಕ್ರೋಶ ಬಂತು ಆದರೆ ಈ ಹಿಂದೆ ಮಾತನಾಡಿದಂಥಾ ಶ್ರೀಮಾನ್ ವಡೆಯರಾಜರವರು ಒಂದು ಪದವನ್ನು ಉಪಯೋಗಿಸಿದರು ಆ ಪದ ಏನೆಂದರೆ ''ತಾವು ಟ್ರೆಜರಿ ಬೆಂಚಸ್‌ನ ಏಜೆಂಟ್''ರಾಗಿ ಕೆಲಸ ಮಾಡುತ್ತೀದ್ದೀರಿ ಎಂದು ಇಂತಹ ಒಂದು ಪದವನ್ನು ಅವರು ಉಪಯೋಗಿಸಿದ್ದರೂ ಕೂಡ ಅವರ ಪಕ್ಕದಲ್ಲೇ ಕೂತಿರತಕ್ಕಂಥಾ ಶ್ರೀಮಾನ್ ಬೊಮ್ಮಾಯಿಯವರಿಗೆ ಕೇಳಿಸಲಿಲ್ಲಾ ಮೇಲಾಗಿ ಆದಕ್ಕೆ ಪ್ರತಿಭಟನೆಯೂ ಇಲ್ಲಾ ಅವರು ತಮ್ಮನ್ನು ಏಜೆಂಟ್ ಆಫ್ ದಿ ಟ್ರೆಜರಿ ಬೆಂಚಸ್ ಅಂತ ಹೇಳಿದ್ದಾರೆ.

MR. SPEAKER.—Let us go to the subject matter now. He should not make any personal charge against any member: that will be expunged. ಹೀಗೆ ಮಾತನಾಡುತ್ತಾ ಹೋದರೆ ಈ ಮನೆಯ ಕೆಲಸ ನಡೆಸುವುದು ಹೇಗೆ ದಯವಿಟ್ಟು ಮುಂದಿನ ಕಾರ್ಯಕಲಾಪಗಳಿಗೆ ಹೋಗೋಣ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಅವರು ಉಪಯೋಗಿಸಿರುವ ಪದ ರೂಲ್ ೨೨೮(೨)ರ ಪ್ರಕಾರ ಇಟ್ ಈಸ್ ನಾಟ್ ಪಾರ್ಲಿಮೆಂಟರಿ ಏಜೆಂಟ್‌ಆಫ್ ಟ್ರೆಜರಿ ಬೆಂಚಸ್ ಅವರು ಉಪಯೋಗಿಸಿರುವ ಪದ ನಾಳೆ ಏನಾದರೂ ಪತ್ರಿಕೆಯಲ್ಲಿ ಪ್ರಕಟವಾಗಿ ಬಿಟ್ಟರೆ ಆವಾಗ ನಮ್ಮದು ತಪ್ಪಾಗುತ್ತದೆ. ನಾವೆಲ್ಲಾ ಈ ರೀತಿಯಾಗಿ ಈ ಮನೆಯಲ್ಲಿ ನಡೆದುಕೊಳ್ಳುತ್ತಿದ್ದೇವೆ ಅನ್ನುವ ಒಂದು ಕೆಟ್ಟ ಅಭಿಪ್ರಾಯ ಜನಗಳಲ್ಲಿ ಬರುತ್ತದೆ. ಆದುದರಿಂದ ಕೂಡಲೇ ಈ ಸದನ ಮುಗಿಯುವುದರೊಳಗೆ ಆ ರೆಕಾರ್ಡನ್ನು ತರಿಸಿ ನೋಡಿ ಅದನ್ನು ಎಕ್ಸ್‌ಪಂಜ್ ಮಾಡಬೇಕೆಂದು ಹೇಳುತ್ತೇನೆ. ಮತ್ತು ಅವರು ಈ ಬಗ್ಗೆ ಕ್ಷಮಾಪಣೆ ಕೇಳಿಕೊಳ್ಳ ಬೇಕು.

ಒಬ್ಬ ಸದಸ್ಯರು :–ಅವರು ಹೇಳಿದ್ದು ಮಾನ್ಯ ಅಧ್ಯಕ್ಷರಿಗಲ್ಲ ಶ್ರೀ ಆರ್ಮುಗಂರವರಿಗೆ.

ಶ್ರೀ ಮಳ್ಳೂರು ಆನಂದರಾವ್.—ಅವರು ಯಾವ ಸದಸ್ಯರಿಗೇ ಹೇಳಿರಲಿ ಅದು ಮಹಾ ಅಪರಾಧ ವಾಗುತ್ತದೆ. ಆದುದರಿಂದ ಅವರು ಹೇಳಿರತಕ್ಕಂಥಾ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ರೂಲ್ ೫೦ರ ಪ್ರಕಾರ ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಅದರ ಮೇಲೆ ನಾವೆಲ್ಲಾ ಈಗ ಏನು ಮಾತನಾಡುತ್ತಿದ್ದೇವೆ ಅವೆಲ್ಲಾ ಕಂಟೆಪ್ಟ್ ಆಫ್ ಕೋರ್ಟ್ ಆಗುತ್ತದೆ ಎಂದು ಹೇಳಿ ನಮ್ಮನ್ನು ಥ್ರೆಟನ್ ಮಾತನಾಡುತ್ತಿದ್ದಾರೆ. He cannot

curtail our rights when I am raising the issue. You were kind enough to say that we can take up this issue tomorrow. You were making some reasonable proposal.

ಅಧ್ಯಕ್ಷರು.—ಇದರ ಬಗ್ಗೆ ನಾಳೆ ನೋಡೋಣ, ದಯವಮಾಡಿ ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ,—ಸ್ವಾಮಿಇದು ಬಹಳ ಸೀರಿಯಸ್ ವಿಷಯ. ಮಾನ್ಯ ಆನಂದ ರಾಯರು ಹೇಳಿದಂಥಾ ವಿಷಯ ಬಹಳ ಗಂಭೀರವಾದ ವಿಷಯ. ಸ್ವಾಮಿ, ಯಾವ ಸದಸ್ಯರೇ ಆಗಲಿ ಅವರು ಒಳ್ಳೆಯ ಕೆಲಸ ಮಾಡಿದರೆ ಅವರನ್ನು ಸರ್ಕಾರದ ಏಜೆಂಟ್ ಅಂತ ಆಗಲೀ ಅಥವಾ ಟೆಜರಿ ಬೆಂಚಸ್ ಅಂತ ಆಗಲಿ ಅವರನ್ನು ಹೀಯಾಳಿಸಿದ್ದಕ್ಕೆ ಅದು ಸರಿಯೇ? ಈ ಪಕ್ಷದಲ್ಲಿರತಕ್ಕಂಥಾವರು ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ತಂದಿದರೆ ಅದನ್ನು ಅಪ್ರೀಷಿಯೇಟ್ ಮಾಡಬೇಕೇ ವಿನಾ ಅವರನ್ನು ಸರ್ಕಾರದ ಏಜೆಂಟ್ ಅಂತಹ ವಾಕ್ಯದಲ್ಲಿ ಕರೆದರೆ ಖಂಡಿತವಾಗಿಯೂ ನಿಜವಾಗಿಯೂ ನಾಳೆ ದಿವಸ ಈ ಸದನದಲ್ಲಿ ಸರಿಯಾಗಿ ಕೆಲಸ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ಆದುದರಿಂದ ಅವರು ಹೇಳಿರತಕ್ಕಂಥಾ ಪದವನ್ನು ರೆಕಾರ್ಡ್‌ನಿಂದ ತೆಗೆಸಿ ಅವರು ಇದರ ಬಗ್ಗೆ ಕ್ಷಮಾಪಣೆ ಕೇಳುವುದಕ್ಕೆ ಅವಕಾಶ ಮಾಡಿಕೊಡ ಬೇಕು ಎಂದು ಹೇಳುತ್ತೇನೆ. ತಕ್ಷಣವಾಗಿ ತಾವು ರೆಕಾರ್ಡ್‌ನ್ನು ತರಿಸಿ ಅದರ ಮೇಲೆ ಸರಿಯಾದ ಆಕ್ಷನ್ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

SRI S.R. BOMMAI.—I made an appeal to all the Member including Sri G.P. Vodeyaraj that we should conduct ourselves here according to rules. We should not make insinuating remarks against any Member here. Mr. Anand Rao should know it. I am not here to defend any Member who makes an allegation. About the question that the Parliamentary Affairs Minister raised, if there is anything said derogatory and if they are on record, they should be expunged. I too am interested. What my good friend, the Hon. Law Minister said should not also go into the records. Therefore, before the evening let them be looked into and see that such matters do not go to the press, which would damage the image of the House. Let not what the Hon. Minister for Law said go in to the record and equally so whatever Sri Vodeyaraj said. According to Parliamentary Rules it should be expunged.

MR. SPEAKER.—I will examine it.

ಶ್ರೀ ಎಸ್. ಬಂಗಾರಪ್ಪ.—ತಾವು ಇದನ್ನು ಪರಿತೀಲನೆ ಮಾಡುತ್ತೇನೆ ಅಂತ ಹೇಳಿದಿರಿ. ಮಾಡಿ. ನಾನು ಬೇಡ ಅಂತ ಹೇಳುವುದಿಲ್ಲಾ, ಮಾನ್ಯ ಕಾನೂನು ಸಚಿವರು ಹೇಳಿರತಕ್ಕಂಥಾದ್ದು ಸಣ್ಣ ವಿಷಯ ವೇನೂ ಅಲ್ಲ. ಅವರು ಥ್ರೆಟನ್ ಮಾಡುವಂಥಾ ವಿಷಯ ಹೇಳಿದ್ದು ಹಕ್ಕುಭಾದ್ಯತಾ ನಿರ್ಣಯಕ್ಕೆ ಹೋಗಬೇಕಾಗುತ್ತದೆ. ಅದು ಈ ಮನೆಯ ಸದಸ್ಯರ ಹಕ್ಕು ಅಲ್ಲದೆ ಮನೆಯ ಹಕ್ಕೂ ಸಹ ಆಗಿರುತ್ತದೆ.

MR. SPEAKER.—I will examine it.

ಶ್ರೀ ಎಸ್. ಬಂಗಾರಪ್ಪ.—ಆ ಹಕ್ಕನ್ನು ಮೊಟಕು ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲಾ,

ಶ್ರೀ ಎಂ. ವೀರಪ್ಪ ಮೊಯ್ಲಿ.—ರೂಲ್ ೫೧ರ ಪ್ರಕಾರ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದೇವೆ.

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳೋಣ. ಎರಡು ದಿವಸದಿಂದಲೂ ಸಹ ಹೀಗೆ ಕಾಲ ಕಳೆದುಕೊಂಡು ಹೀಗೆ ಮಾತನಾಡುತ್ತಿದ್ದೀರಲ್ಲಾ.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಸ್ವಾಮಿ, ಸಭೆ ನಾಳೆ ಒಂದೇ ದಿವಸ ಇರುವುದು.

ಅಧ್ಯಕ್ಷರು.—ಅದನ್ನು ನಾಳೆ ಪ್ರಸ್ತಾಪ ಮಾಡೋಣ. ಈಗ ಬೇಡ.

Firing at Yadgir—Notice for discussion

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಾಮಿ, ನಾಳೆ ದಿವಸ ಯಾದಗಿರಿ ಪ್ರಕರಣದ ಬಗ್ಗೆ ೨ ೨/೧ ಗಂಟೆ ಕಾಲ ಇದೆ. ಇದನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು.—ನಾಳೆ ದಿವಸ ಬೇಕಾದರೆ ೨ ಗಂಟೆಯವರೆಗೂ ಕೂತುಕೊಂಡು ಈ ಬಿಸಿನೆಸ್ ಅನ್ನು ಮುಗಿಸೋಣ. ದಯವಿಟ್ಟು ಕೂತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ನಾಳೆ ದಿವಸ ಯಾದಗಿರಿ ಪ್ರಕರಣ ಇದೆಯೆಲ್ಲಾ ಸ್ವಾಮಿ?

ಅಧ್ಯಕ್ಷರು.—ಅದಕ್ಕೆ ನಾನು ಏನು ಮಾಡಬೇಕು ಎಂದು ನಾನು ಹೇಳುತ್ತೇನೆ. ಯಾವುದಕ್ಕೆ ಪ್ರಯಾರಿಟಿ ಕೊಡಬೇಕು ಎಂದು ನಾವು ನೀವು ಕೂತುಕೊಂಡು ಡಿಸಿಷನ್‌ಗೆ ಅರೈವ್ ಆಗೋಣ. ತಾವು ಬಿಲ್ ಮೇಲೆ ಮಾತಾಡಿ.

ಶ್ರೀ ಆರ್. ಗುಂಡೂರಾವ್.—ಈಗ ನಾನು ಮಾತನಾಡುವ ಮೊದಲು ಮಾನ್ಯ ವೀರಪ್ಪ ಮೊಯ್ಲಿ ಅವರು ನನ್ನ ಪರವಾಗಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು.—ಇದು ವಿರೋಧ ಪಕ್ಷದ ನಾಯಕರಿಗಿರತಕ್ಕ ಒಂದು ಪ್ರಿವಿಲೇಜ್.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಗುಂಡೂರಾಯರು ಮೊದಲನೆಯ ಸಲ ಬಿಲ್ ಬಗ್ಗೆ ತಮ್ಮ ಭಾಷಣವನ್ನು ಇನ್‌ಷಿಯೇಟ್ ಮಾಡುತ್ತಿದ್ದಾರೆ, ಅವರ ಭಾಷಣವನ್ನು ಕೇಳುವುದಕ್ಕೆ ನಾವು ಬಹಳ ಕಾತುರರಾಗಿದ್ದೇವೆ. ಅವರು ಮಾತನಾಡುವುದನ್ನು ಬಿಟ್ಟು ಬೇರೆಯವರಿಗೆ ಏಕೆ ಡೆಲಿಗೇಟ್ ಮಾಡುತ್ತಿದ್ದಾರೋ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರಾದ ಆನಂದರಾಯರು ಹೇಳಿದ್ದಕ್ಕೆ ಬಹಳ ಅಭಿನಂದನೆಗಳು. ನಮ್ಮ ಸ್ನೇಹಿತರಾದ ಮಾನ್ಯ ವೀರಪ್ಪ ಮೊಯಿಲಿಯವರು ಏನೂ ಒಂದು ವಿಷಯವನ್ನು ಎತ್ತಿದ್ದಾರೆ ಅದರ ಬಗ್ಗೆ ನಾವು ನನ್ನ ಭಾಷಣವನ್ನು ಇನಿಷಿಯೇಟ್ ಮಾಡಬೇಕು ಎಂದು ತಾವು ಹೇಳಿದ್ದೀರಿ ಎಂದು ತಿಳಿದು ನಾನು ಅವರಿಗೆ ಹೇಳಿದೆ. ನ್ಯಾಯಾಂಗ ಮಂತ್ರಿಗಳು ಅವರು ಹೇಳಿದ ಹಾಗೆ, ಇದು ಬಹಳ ಗಂಭೀರವಾದ ಪ್ರಶ್ನೆಯಾಗಿದೆ. ನಾಳೆಯ ದಿವಸ ಯಾದಗೀರ್ ಗೋಳಿಬಾರ್ ಪ್ರಶ್ನೆ ಇದೆ, ಅದಕ್ಕೆ ಎರಡೂವರೆ ಗಂಟೆ ಎಂದು ತಾವು ಫಿಕ್ಸ್ ಮಾಡಿದ್ದೀರಿ, ಬಹುಶಃ ಎರಡೂ ಕಡೆಯ ಸದಸ್ಯರೂ ಪೂತನಾಡುವವರಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮ ಕಡೆಯವರೂ ಇದ್ದಾರೆ.

ಶ್ರೀ ಆರ್ ಗುಂಡೂರಾವ್.—ತಮ್ಮ ಕಡೆಯವರು ಬಹಳ ಚೆನ್ನಾಗಿಯೇ ಈ ಚರ್ಚೆಯಲ್ಲಿ ಭಾಗವಹಿಸಬಹುದು. ಇದು ಇಡೀ ರಾಜ್ಯದಲ್ಲಿ ಎಲ್ಲರ ಗಮನವನ್ನು ಸೆಳೆದಿರತಕ್ಕ ವಿಷಯ. ತಾವೇನೋ ಇದಕ್ಕೆ ಎರಡೂವರೆ ಗಂಟೆ ಸಮಯವನ್ನು ಗೊತ್ತು ಮಾಡಿದ್ದೀರಿ. ಇದು ಮೂರು ಅಥವಾ ನಾಲ್ಕು ಗಂಟೆಯಾಗಬಹುದು. ಎಷ್ಟು ಸಮಯ ಆದು ತೆಗೆದುಕೊಳ್ಳುತ್ತದೆಯೋ ಎಂದು ನಾನು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ನಿಯಮಾವಳಿಗಳ ಪ್ರಕಾರ ಇದಕ್ಕೆ ಎರಡೂವರೆ ಗಂಟೆ ಸಮಯವನ್ನು ಮಾತ್ರ ಗೊತ್ತು ಮಾಡಿರುವುದು.

SRI R. GUNDU RAO.—By the way the discussion is going on here, I doubt very much whether it will be over within 2½ hours.

MR. SPEAKER.—Both the sides have to issue whip to their members to confine to the timings.